# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 7(75) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಚಿದಾನಂದ ಎಂ ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 04-03-2025 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಗರ ಸ್ಥಳೀಯ ಸಂಸ್ಥೆಗಳ ಆಸ್ತಿದಾರರಿಗೆ ಮೂರು ತಿಂಗಳಲ್ಲಿ ಬಿ ಖಾತಾ ನೀಡಲು ಸರ್ಕಾರ ನಿರ್ಧರಿಸಿದೆಯೇ: ಹಾಗಿದ್ದಲ್ಲಿ ಈ ಅವಧಿಯಲ್ಲಿ ಎಲ್ಲರಿಗೂ ಖಾತಾ ಸಿಗುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು? ಇದಕ್ಕಾಗಿ ಮಾಡಿಕೊಂಡಿರುವ ಸಿದ್ಧತೆಗಳೇನು: | ಹೌದು.<br><br>ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇ-ಖಾತಾ ನೀಡಲು ಅಭಿಯಾನ ಕೈಗೊಂಡು 3 ತಿಂಗಳ ಒಳಗಾಗಿ ಎಲ್ಲಾ ಸ್ವತ್ತುಗಳಿಗೆ ಇ-ಆಸ್ತಿ ತಂತ್ರಾಂಶದಲ್ಲಿ ಖಾತಾ ನೀಡಲು ಅಗತ್ಯ ಕ್ರಮ ವಹಿಸಲು ಪ್ರಮಾಣೀತ ಕಾರ್ಯಾಚರಣೆ ವಿಧಾನವನ್ನು ಅಳವಡಿಸಲಾಗಿದೆ. |
| ಆ) | ಸಾರ್ವಜನಿಕರು ಬಿ-ಖಾತಾ ಪಡೆಯಲು ನೀಡಬೇಕಾದ ದಾಖಲೆಗಳು ಯಾವುವು: | ಅನಧಿಕೃತ ಸ್ವತ್ತುಗಳಿಗೆ ಈ ಕೆಳಗಿನ ದಾಖಲೆಗಳನ್ನು ಸಲ್ಲಿಸಬೇಕಾಗುವುದು.<br>• ಆಸ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ಮಾಲೀಕತ್ವದ ಸಾಬೀತುಪಡಿಸುವ ದಿನಾಂಕ:10-09-2024 ರ ಪೂರ್ವದಲ್ಲಿ ನೋಂದಾಯಿತ ಮಾರಾಟ ಪತ್ರಗಳು/ ದಾನಪತ್ರ/ ವಿಭಾಗಪತ್ರಗಳು/ ಹಕ್ಕುಖುಲಾಸೆ ಪತ್ರಗಳು.<br>• ಚಾಲ್ತಿ ಸಾಲಿನವರೆಗೆ ಆಸ್ತಿ ತೆರಿಗೆ ಪಾವತಿ ರಶೀದಿ.<br>• ಪ್ರಸಕ್ತ ಸಾಲಿನವರೆಗೆ ಋಣಭಾರ ಪ್ರಮಾಣ ಪತ್ರ.<br>• ಮಾಲೀಕರ ಫೋಟೋ ಮತ್ತು ಸ್ವತ್ತಿನ ಫೋಟೋ.<br>• ಮಾಲೀಕರ ಗುರುತಿನ ದಾಖಲೆ ಪ್ರತಿ. |
| ಇ) | ಮೊದಲ ಬಾರಿಗೆ ಬಿ-ಖಾತಾ ಪಡೆಯುವ ಸಾರ್ವಜನಿಕರಿಗೆ ದುಪ್ಪಟ್ಟು ತೆರಿಗೆ ವಿಧಿಸಲಾಗುತ್ತದೆಯೇ: ಇದರಿಂದ ಸಾರ್ವಜನಿಕರಿಗೆ ಹೊರೆಯಾಗಿ ಆಸ್ತಿದಾರರು ಖಾತಾ ಪಡೆಯಲು ನಿರಾಸಕ್ತಿ ತೋರುವುದಿಲ್ಲವೆ: ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ದುಪ್ಪಟ್ಟು ತೆರಿಗೆಯನ್ನು ಕೈ-ಬಿಡಲಾಗುವುದೆ: | ಕರ್ನಾಟಕ ಪೌರಸಭೆಗಳ ಕಾಯ್ದೆ 1964 ಕ್ಕೆ ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ1976 ಕ್ಕೆ ತಿದ್ದುಪಡಿ ತರಲಾಗಿದ್ದು, ಅನಧಿಕೃತ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸುವ ವರ್ಷದಲ್ಲಿ ಮಾತ್ರ ತೆರಿಗೆಯ ಎರಡರಷ್ಟನ್ನು ನಂತರದ ವರ್ಷಗಳಲ್ಲಿ ಆಸ್ತಿ ತೆರಿಗೆಯನ್ನು ಮಾತ್ರ ವಸೂಲಿ ಮಾಡಲಾಗುತ್ತದೆ. |

| | | |
|---|---|---|
| ಈ) | ಪ್ರಸ್ತುತ ನೀಡುವ ಬಿ ಖಾತಾವನ್ನು ಆಸ್ತಿ ವರ್ಗಾವಣೆಗೆ/ಮಾರಾಟಕ್ಕೆ ಪರಿಗಣಿಸಲಾಗುತ್ತಿದೆಯೇ: ಪ್ರಸ್ತುತ ನೀಡುವ ಬಿ ಖಾತಾವನ್ನು ಯಾವ ಉದ್ದೇಶಗಳಿಗೆ ಬಳಸಬಹುದಾಗಿದೆ: | ಹೌದು.<br><br>ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿನ ಆಸ್ತಿ ತೆರಿಗೆ ಉದ್ದೇಶಕ್ಕೆ ಪ್ರತ್ಯೇಕ ವಹಿಯಲ್ಲಿ ನಿರ್ವಹಿಸಲಾಗುತ್ತಿದೆ. |
| ಉ) | ತುಮಕೂರು ಜಿಲ್ಲೆಯ ಶಿರಾ ನಗರಸಭೆ ವ್ಯಾಪ್ತಿಯಲ್ಲಿ ಇರುವ ಒಟ್ಟು ಅನಧಿಕೃತ ನಿವೇಶನಗಳ ಸಂಖ್ಯೆ ಎಷ್ಟು: | ತುಮಕೂರು ಜಿಲ್ಲೆಯ ಶಿರಾ ನಗರಸಭೆ ವ್ಯಾಪ್ತಿಯಲ್ಲಿ ಇರುವ ಒಟ್ಟು ಅನಧಿಕೃತ ನಿವೇಶನಗಳ **ಸಂಖ್ಯೆ: 9126** |
| ಊ) | ಕಂದಾಯ ನಿವೇಶನಗಳಿಗೆ ಬಿ ಖಾತಾ ನೀಡುವಾಗ ನಿವೇಶನ ಮತ್ತು ಮನೆಯ ಸ್ಥಳ ಧೃಡೀಕರಣಕ್ಕಾಗಿ ಸದರಿ ನಿವೇಶನ/ಮನೆಯ ಅಕ್ಷಾಂಶ ಮತ್ತು ರೇಖಾಂಶವನ್ನು ಸಂಗ್ರಹಿಸಿ ಅನುಸರಿಸುವ ವಿಧಾನ ಯಾವುದು: | ಭೌತಿಕವಾಗಿ ಪರಿಶೀಲಿಸಿ ಅಕ್ಷಾಂಶ ಮತ್ತು ರೇಖಾಂಶವನ್ನು ಸಂಗ್ರಹಿಸಲಾಗುತ್ತಿದೆ. |

ನಅಇ 50 ಜಿಇಎಲ್ 2025

**(ರಹೀಂ ಖಾನ್)**
ಮಾನ್ಯ ಪೌರಾಡಳಿತ ಮತ್ತು
ಹಜ್ ಸಚಿವರು